


ಎಡದಿಂದ ಬಲಕ್ಕೆ:
1. ಪಾಯಸದ ಸವಿ ಹೆಚ್ಚಿಸಲು ಒಂದು ಒಳ್ಳೆಯ ತಂತ್ರ (4)
3. ಕಾಲಹರಣಕ್ಕೆಂದು ಜಗಳ ತೆಗೆಯುವುದೇ? (3)
4. ಸೇವಂತಿಗೆಯೂರಲ್ಲಿ ತಂಗುದಾಣ ಸಿಗಬಹುದೇ? (3)
6. ನೋಡು, ನೋಡು, ನೆಟ್ಟು ಬೆಳೆಸಿರುವ ಕಾಡು ಇದು (4)
7. ಗಡ್ಡದಿಂದಲೇ ಅವನಿಗೆ ತೊಂದರೆಯಾಯಿತು (4)
8. ಪಾಸು ಮಾಡಿದ್ದಾಯಿತು. ಇನ್ನೇಕೆ ಈ ಗುಟ್ಟು ನುಡಿ? (4)
10. ಬಡಬಡಿಸ ಹೋಗಿ ಕಡೆಗೆ ತಬ್ಬಿಬ್ಬಾಯಿತು (4)
12. ಪರಮಾನಂದದ ಸ್ಥಳ ಸ್ವರ್ಗ ಹೌದೇ? (4)
14. ಸತ್ಯಶೋಧನಕ್ಕೆ ಇಳಿದಿದ್ದಾನೆ ನೋಡಿ ತತ್ವಜ್ಞಾನಿ (4)
16. ದೊಡ್ಡಿಯಲ್ಲಿ ಕಾಲಿಟ್ಟ ದೈತ್ಯ ವ್ಯಕ್ತಿ (3)
17. ಕಳ್ಳನ ಕೆಲಸದ ತುಂಬ ಬರೀ ದೋಷ (3)
18. ಕಾವಲಿರುವಾಗಲೆಲ್ಲ ಅಲ್ಲಿ ಸದಾ ಮಧುರ ಧ್ವನಿ (4)

ಮೇಲಿಂದ ಕೆಳಕ್ಕೆ:
1. ಹೊಸದನ್ನೇ ಹುಡುಕಬೇಕೆಂದರೆ ತುಂಬ ಸಂಯಮ ಬೇಕು (3)
2. ನಾವೆಯನ್ನ ನಡೆಸುತ್ತಿದ್ದಾನಲ್ಲ, ಆತ ಅನ್ಯದೇಶೀಯ (3)
3. ಅಂಗಡಿಯ ತುಂಬ ಬಂಡೆ ಹೆಸರಿನ ಹಣ್ಣು (4)
5. ಸಂತನಿಗೆ ಪ್ರಿಯವಾದದ್ದು ಇದೇ ಆಹಾರ (3)
7. ಭಾಗ್ಯವಂತನ ಮನೆಗೆ ಕರೆಯದೇ ಹೋದವ (4)
9. ರಂಗು ರಂಗಿನ ಮಾತು–ಕಡೆಗೆ ಸೇರಿದ್ದು ಜೈಲು (4)
11. ಬಲವಿದ್ದ ಕೂಡಲೇ ಪಂಡಿತನಾದಾನೇ? (3)
13. ಕರಡಿ ಕಂಡದ್ದಕ್ಕೆ ಹೀಗೊಂದು ಸುಂದರ ಭರಣಿ (4)
14. ದಯೆಗೆ ತಕ್ಕ ಫಲ ನೀಡುವವನು ಗೊತ್ತೇ? (3)
15. ಕೇಕೆ ಹಾಕುತ್ತ ನಿಂತನಲ್ಲ, ಬೆಪ್ಪ! (3)

## ಪದಬಂಧ 29-12-2011ರ ಉತ್ತರಗಳು

ಎಡದಿಂದ ಬಲಕ್ಕೆ:
1. ಅನಾಹುತ; 3. ನವಮಿ; 4. ಗಾಬರಿ; 6. ಅಭಿನಯ; 8. ಮುಜುಗರ; 10. ರವಿವಾರ; 12. ಕೆಳೆತನ (=ಗೆಳೆತನ); 16. ನಯನ; 17. ವಿನೀತ; 18. ನಮಸ್ಕಾರ.

ಮೇಲಿಂದ ಕೆಳಕ್ಕೆ:
1. ಅಮಿತ; 2. ತಗಾದೆ; 3. ನಳಿನ; 5. ರಿವಾಜು; 6. ಅಪಹಾರ; 7, ಯಶಸ್ಕರ; 8. ಮುಚ್ಚಳಿಕೆ; 9. ರಜಾದಿನ; 11. ವಾಹನ; 13. 'ಳಿರತ' ('ತರಳೆ' ತಲೆ ಕೆಳಗು); 14. ಹನನ; 15. ಸಾವಿರ.

# ಸಸ್ಯ ಸೋಜಿಗ

## ಕಾಯಿ ಹಣ್ಣಾಗುವುದು ಹೇಗೆ?

ಹೂ ಬಿಡುವ ಸಸ್ಯಗಳಲ್ಲಿ ಫಲವಂತವಾದ ಹೆಣ್ಣು ಹೂಗಳು ಹೀಚಾಗಿ ಕಾಯಾಗಿ ಕೊನೆಗೆ ರಸಭರಿತ ವರ್ಣಮಯ ಹಣ್ಣುಗಳಾಗುವ ನೈಸರ್ಗಿಕ ಕ್ರಿಯೆಯಲ್ಲಿ ನಾಲ್ಕು ವಿಭಿನ್ನ ವಿಶಿಷ್ಟ ಹಂತಗಳಿವೆ. ಈ ಕ್ರಿಯೆಯ ಮೊದಲ ಮೂರು ಹಂತಗಳಲ್ಲಿ 'ಆಕ್ಸಿನ್' ಎಂಬ ಒಂದು ವಿಶೇಷ ಸಸ್ಯ ಹಾರ್ಮೋನು ಮತ್ತು ಕಡೆಯ ಹಂತದಲ್ಲಿ 'ಪೆಕ್ಟಿನ್' ಎಂಬ ಮತ್ತೊಂದು ಸಸ್ಯ ಹಾರ್ಮೋನು ನಿರ್ಣಾಯಕ ಪಾತ್ರ ನಿರ್ವಹಿಸುತ್ತವೆ.

ಮೊದಲ ಹಂತದಲ್ಲಿ ಫಲವಂತವಾದ ಅಂಡಾಣು ರಭಸವಾಗಿ ವಿಭಜನೆಗೊಳ್ಳುತ್ತ ಕೆಲ ದಿನಗಳಲ್ಲೇ ಆಯಾ ಸಸ್ಯ ಪ್ರಭೇದದ್ದೇ ನಿರ್ದಿಷ್ಟ ಗರಿಷ್ಠ ಸಂಖ್ಯೆ ಮುಟ್ಟುತ್ತವೆ. ಈ ಘಟ್ಟದ ನಂತರ ಜೀವಕೋಶಗಳ ಸಂಖ್ಯೆ ಒಂದೇ ಒಂದೂ ಹೆಚ್ಚುವುದಿಲ್ಲ. ಹೂವು 'ಹೀಚು' ಆಗುವ ಹಂತ ಇದು.

ಎರಡನೆಯ ಹಂತದಲ್ಲಿ ಹೀಚಿನ ಒಳಗಿನ ಪ್ರತಿಯೊಂದು ಜೀವಕೋಶವೂ ಒಬ್ಬ ತೊಡಗುತ್ತದೆ. ಅವುಗಳ ಒಳಗೆಲ್ಲ ಶರ್ಕರ ಪಿಷ್ಟಗಳು ಸಂಗ್ರಹವಾಗಿ ರುಚಿ–ರಸಗಳು ತುಂಬಿಕೊಳ್ಳುತ್ತವೆ. ಬೀಜಗಳು ಹುದುಗಿದ ಈ ತಿರುಳನ್ನು ಆವರಿಸಿದ ಸಿಪ್ಪೆ ದೃಢವಾಗುತ್ತದೆ. ಹೀಚು ಉಬ್ಬಿ ಕಾಯಿ ಆಗುವ ಹಂತ ಇದೇ.



ಮುಂದಿನ ಹಂತದಲ್ಲಿ ತಿರುಳಿನ ರುಚಿ–ರಸ ಸಂಗ್ರಹ ಹೆಚ್ಚುವುದರ ಜೊತೆಗೆ ಕಾಯಿಯ ಒಳಗಿನ ಬೀಜಗಳು ಪ್ರೌಢ ಹಂತವನ್ನು ಸಮೀಪಿಸುತ್ತವೆ. ತಿರುಳಿನ ಮತ್ತು ಸಿಪ್ಪೆಯ ಪ್ರತಿ ಜೀವಕೋಶದಲ್ಲೂ ಆಯಾ ಸಸ್ಯ ಪ್ರಭೇದದ ವಿಶಿಷ್ಟ ವಾಸನೆ ಬೆರೆಯತೊಡಗುತ್ತದೆ. ಹಾಗಾದೊಡನೆ ಪೆಕ್ಟಿನ್ ಹಾರ್ಮೋನಿನ ಉತ್ಪಾದನೆ ಆರಂಭವಾಗಿ ಕೆಲ ದಿನಗಳಲ್ಲೇ ಗರಿಷ್ಠ ಮಟ್ಟ ಮುಟ್ಟುತ್ತದೆ. ಕಾಯಿ ಪೂರ್ಣ ಬಲಿತು ನಿಲ್ಲುತ್ತದೆ.

ಹಸಿರು ಬಣ್ಣದಲ್ಲೇ ಇದ್ದರೂ ಕಾಯಿ ಹೀಗೆ ಸಂಪೂರ್ಣ ಬಲಿತೊಡನೆ ಮಾಯೆಯೋ ಎಂಬಂತೆ ಪೆಕ್ಟಿನ್‌ನ ಉತ್ಪಾದನೆ ನಿಂತುಹೋಗುತ್ತದೆ. ಹಾಗಾದೊಡನೆ ಕಾಯಿಯ ಸಿಪ್ಪೆಯಲ್ಲಿನ ಹರಿತ್ತು ಕಡಿಮೆಯಾಗತೊಡಗುತ್ತದೆ. ಹಸಿರು ಹೊರತಾದ ಇತರ ಬಣ್ಣಗಳು ಸಿಪ್ಪೆಯಲ್ಲಿ ಮೂಡತೊಡಗುತ್ತವೆ: 'ಬಾಳೆಹಣ್ಣಿನ ಬಂಗಾರ ಹಳದಿ, ಸೇಬಿನ ಸುಂದರ ಕೆಂಪು, ಕಿತ್ತಳೆಯ ಕಿತ್ತಳೆ ವರ್ಣ ಇತ್ಯಾದಿ.' ಜೊತೆ ಜೊತೆಗೇ ಕಾಯಿ ಸಂಪೂರ್ಣ ಪಕ್ವವಾಗಿ ರಸ– ರುಚಿ– ವಾಸನೆ– ವರ್ಣಭರಿತ ಹಣ್ಣು ಆಗುತ್ತದೆ.

ಹಣ್ಣುಗಳ ಪರಮೋದ್ದೇಶ ಬೀಜ ಪ್ರಸಾರ. ಎಂದರೆ ಸಂತಾನ ವರ್ಧನೆ. ಆ ಕಾರ್ಯಕ್ಕೆ ಒಪ್ಪವಾಗುವಂತೆ ಅದಕ್ಕೆ ನೆರವಾಗುವ ಪ್ರಾಣಿ ಪಕ್ಷಿಗಳಿಗೆ ಆಕರ್ಷಕವಾಗುವ ಬಣ್ಣಗಳನ್ನು ಪ್ರದರ್ಶಿಸಿ, ಇಷ್ಟವಾಗುವ ರಸ–ರುಚಿ–ವಾಸನೆಗಳ ತಿರುಳನ್ನು ಧರಿಸಿ ಹಣ್ಣುಗಳು ಅಂಥ ಜೀವಿಗಳನ್ನು ಸೆಳೆಯುತ್ತವೆ. ತನ್ಮೂಲಕ ಬೀಜ ಪ್ರಸಾರ ಕೈಗೂಡುತ್ತದೆ. ಎಂಥ ಅದ್ಭುತ ವ್ಯವಸ್ಥೆ!

■ ಎನ್. ವಾಸುದೇವ್